ದಿನಾಂಕಃ 22-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಜಿ ವಕೀಲರಿಂದ

ನನಗೆ ವಾದಿಯು ದಾಯಾದಿ ಯಾಗಬೇಕು. ದಾಯಾದಿ ಎಂದರೆ ನನ್ನ ತಂದೆಯವರ ತಂದೆ ಮತ್ತು ಅವರ ತಂದೆಯವರ ತಂದೆ ಅಣ್ಣ ತಮ್ಮಂದಿರು. ಮುನಿವೆಂಕಟಪ್ಪನ ಮಗ ದೊಡ್ಡ ವೆಂಕಟಪ್ಪನೂ ಸಹ ಅಣ್ಣ ತಮ್ಮಂದಿರು. ವಾದಿಯು ದಾವೆಯನ್ನು 2 ನೇ ಪ್ರತಿವಾದಿ ವಿರುದ್ದ ಹಾಕಿರುತ್ತಾರೆ. ಜಮೀನು ನಮ್ಮದು ಎಂದು ದಾವಾ ಹಾಕಿದ್ದಾರೆ. ಆ ಜಮೀನಿನ ನಂ. 16. ನನ್ನ ಜಮೀನು ನಂ.16 ರ ಪಕ್ಕದಲ್ಲಿ ಇರುವ ಕಾರಣ ಗೊತ್ತು. ನಂ.16 ರ ಒಂದು ಸೈಟ್ ಬಿಟ್ಟು ಪೂರ್ವಕ್ಕೆ ಇದ್ದೇನೆ. ರಾಮಪ್ಪನ ಸೈಟ್ ಆದ ನಂತರ ನನ್ನ ಸೈಟ್. ರಾಮಪ್ಪನ ಸೈಟ್ ನಂ.15. ಸರ್ಕಾರದಿಂದ ದರಕಾಸ್ತ್ ನಲ್ಲಿ ಮಂಜೂರಾದ ಸೈಟ್ ಆಗಿರುತ್ತದೆ. 1995 ಅಥವಾ 1996 ರಲ್ಲಿ ವಾದಿಗೆ ಮಂಜೂರಾಗಿರುತ್ತದೆ. ದರಕಾಸ್ತ ಅನ್ನು ಇ ಒ ರವರು ಕೊಟ್ಟಿರುತ್ತಾರೆ. ನಾವೆಲ್ಲಾ ಗುಡಿಸಲು ಹಾಕಿಕೊಂಡಿದ್ದೆವು ಇ ಒ ರವರು ಬಂದು ದರಕಾಸ್ತು ನಲ್ಲಿ ಮಂಜೂರು ಮಾಡಿರುತ್ತಾರೆ. ದರಕಾಸ್ತು ನಲ್ಲಿ 30 -40 ಜನ ಇಟ್ಟುಕೊಂಡಿದ್ದರು. ದರಕಾಸ್ತು ನಲ್ಲಿ ಎಷ್ಟು ಜನರಿಗೆ ಆಗಿದೆ ಎಂದು ಅವರ ಹೆಸರು ಹೇಳಲು ನೆನಪಿಲ್ಲ. ಯಾವ ದಿನಾಂಕ ದರಕಾಸ್ತು ಇಟ್ಟುಕೊಂಡಿದ್ದರು ಎಂದರೆ ಗೊತ್ತಿಲ್ಲ. ಎಲ್ಲರಿಗೂ ಒಂದೇ ಬಾರಿ ದರಕಾಸ್ತು ಕೊಟ್ಟಿದ್ದಾರೆ. ದರಕಾಸ್ತು ಅನ್ನು ಪಿ ಡಿ ಒ ಕಟ್ಟಿರುತ್ತಾರೆ. ಯಾರಿಗೆ ಮೊದಲು ದರಕಾಸ್ತು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಎಲ್ಲರಿಗೂ ಒಟ್ಟಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 35 ಜನಕ್ಕೆ ದರಕಾಸ್ತು ಕೊಟ್ಟಿದ್ದು ಅದರಲ್ಲಿ ಯಾರು ಯಾರಿಗೆ ಯಾವ ಯಾವ ಸೈಟ್ ನಂಬರ್ ಕೊಟ್ಟಿದ್ದಾರೆ

ಗೊತ್ತಿಲ್ಲ. ಎಲ್ಲೆಲ್ಲಿ ಇದ್ದೀರಿ ಅವರು ಅಲ್ಲೆ ಇರಿ ಎಂಬುದಾಗಿ ದರಕಾಸ್ತು ಕೊಟ್ಟಿದ್ದಾರೆ. ಯಾರು ಯಾರು ಎಲ್ಲೆಲ್ಲಿ ಇದ್ದಾರೆ ಎಂದು ಕೆಲವರು ಗೊತ್ತು . ನಾನು ನನ್ನ ಪಕ್ಕದಲ್ಲಿ ಇರುವ ದರಕಾಸ್ತು ಕೊಟ್ಟಿರುವ ಹೆಸರು ಹೇಳಬಲ್ಲೆ. ಕೆಲವರ ದರಕಾಸ್ತು ನಂಬರ್ ಹೇಳಬಲ್ಲೆ. ರಾಮಪ್ಪ 15 ನೇ ನಂಬರ್. ನಡಿಪಪ್ಪ ಎಂಬುವವರು 14 ನಂಬರ್ ಕೊಟ್ಟಿರುತ್ತಾರೆ. ನನ್ನ ಪಕ್ಕದಲ್ಲಿ ವೆಂಕಟಪ್ಪನಿಗೆ 1 ನೇ ನಂಬರ್ ಕೊಟ್ಟಿರುತ್ತಾರೆ. ನಾನು ಮೇಲೆ ಹೇಳಿದ ಎಲ್ಲರೂ ಗೌರಮ್ಮನ ಪೂರ್ವಕ್ಕೆ ಬರುತ್ತಾರೆ. ಸಾಕ್ಷಿಯು ಪುನಃ ವೆಂಕಟಪ್ಪ ಉತ್ತರಕ್ಕೆ ಎಂದು, ಮತ್ತೆ ಪುನಃ ದಕ್ಷಿಣಕ್ಕೆ ಎಂದು ನುಡಿಯುತ್ತಾರೆ.

ದರಕಾಸ್ತು ಆಗಿ ನಿವೇಶನಗಾಗಿ ಕೊಟ್ಟ ಮೂಲತಃ ಜಾಗ ದೇವರ ಮಾನ್ಯಕ್ಕೆ ಸೇರಿದ್ದು ಅಲ್ಲಿ ನಾವು ಗುಡಿಸಲು ಹಾಕಿಕೊಂಡಿದ್ದೆವು ಕೊಟ್ಟಿರುತ್ತಾರೆ. ಅದು ಗ್ರಾಮ ಠಾಣಾ ಜಾಗ. ದೇವರ ಮಾನ್ಯ ಜಾಗ ಒಟ್ಟು ವಿಸ್ತೀರ್ಣ ಗೊತ್ತಿಲ್ಲ. ದರಕಾಸ್ತು ಜಮೀನನ್ನು ಯಾವ ಅಧಿಕಾರಿ ತೆಗೆದುಕೊಂಡು ಯಾರು ಕೊಟ್ಟರು ಎಂದರೆ ಸಾಕ್ಷಿಯು ಎ ಸಿ ಮತ್ತು ಪಿ ಡಿ ಒ ರವರು ಬಂದು ಕೊಟ್ಟಿರುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂದಿ ಗೊತ್ತು. ಉತ್ತರಕ್ಕೆ ರಸ್ತೆ , ಉತ್ತರಕ್ಕೆ ರಸ್ತೆಯಾದ ನಂತರ ಕದಿರಪ್ಪ ನವರ ಜಾಗ. 2 ನೇ ಪ್ರತಿವಾದಿಯು 1996 ರಲ್ಲಿ ವಾದಿಯ ಮೇಲೆ ಸ್ಥಳಕ್ಕಾಗಿ ಗಲಾಟೆ ಮಾಡಿರುತ್ತಾರೆ. ವಾದಿಯು ಅದರ ಬಗ್ಗೆ ದೂರು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಆ ಗಲಾಟೆಯಾದಾಗ ನಾನು ಸ್ಥಳಕ್ಕೆ ಹೋಗಿ ಯಾವುದೇ ಪಂಚಾಯ್ತಿ ಮಾಡಿಲ್ಲ. ಯಾವುದೇ ಗಲಾಟೆಯಾಗದಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಯಾವಾಗಲೂ ಸ್ವಾಧೀನ ಇಲ್ಲ ಎಂದರೆ ಸಾಕ್ಷಿಯು ಪಾಯ ಹಾಕಿದ್ದಾರೆ ಎಂದು ನುಡಿಯುತ್ತಾರೆ. 1996 ರಲ್ಲೆ ಜಗಳ ಆದಾಗಲೇ ಪಾಯ ಹಾಕಿರುತ್ತಾರೆ. ಪಾಯ ಹಾಕುವಾಗಲೇ ಗಲಾಟೆ ಆಗಿರುತ್ತದೆ. ಪಾಯ ಹಾಕುವ ವೇಳೆಯಲ್ಲಿ ನಾನು ಹೋಗಿಲ್ಲ. ಪಾಯ ಇರುವ ಬಗ್ಗೆ ದಾಖಲಾತಿ ನೋಡಿಲ್ಲ, ಪಾಯ ನೋಡಿದ್ದೇನೆ. ಹಕ್ಕು ಪತ್ರ ಬಿಟ್ಟು ಬೇರೆ ದಾಖಲಾತಿ ನೋಡಿಲ್ಲ. 16 ನೇ ನಂಬರ್ ಸೈಟ್ ಶ್ರೀರಾಮಪ್ಪನಿಗೆ ಸೇರಿದ್ದು ನಾನು

ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನನಗೆ ಹತ್ತಿರದ ಸಂಬಂಧಿಕರು ಈ ಕಾರಣದಿಂದ ನಾನು ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಪಾಯ ಹಾಕಲು ಹೊದಾಗ ವಾದಿ ಗಲಾಟೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಆ ವೇಳೆಯಲ್ಲಿ ವಾದಿಯ ವಿರುದ್ದ ದೂರು ಕೊಟ್ಟಿರುತ್ತಾರೆ ಆ ವಿಷಯ ನನಗೆ ಗೊತ್ತು ಎಂದರೆ ಸರಿಯಲ್ಲ. ಈ ಗಲಾಟೆಯ ವಿಚಾರವಾಗಿ ಯಾವುದೇ ಪಂಚಾಯ್ತಿ ನಡೆದಿಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ

ದಿನಾಂಕಃ 22-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಜಿ ವಕೀಲರಿಂದ

ವಾದಿಯು ನನಗೆ ಅತ್ತಿಗೆಯಾಗಬೇಕು. ರವಣಪ್ಪ ನನಗೆ ಅಣ್ಣನಾಗಬೇಕು. ಈ ದಾವೆಯನ್ನು ಸೈಟ್ ಬಗ್ಗೆ ವಾದಿಯು 1 ನೇ ಪ್ರತಿವಾದಿ ವಿರುದ್ಧ ಹಾಕಿರುತ್ತಾರೆ. ಈ ದಾವೆ ಯಾವಾಗ ಹಾಕಿದ್ದರು ಎಂದು ನನಗೆ ದಿನಾಂಕ ಗೊತ್ತಿಲ್ಲ. ದಾವಾ ಆಸ್ತಿ ವಾದಿಗೆ ಹೇಗೆ ಬಂತು ಎಂದರೆ ಸಾಕ್ಷಿಯು ನಮಗೆಲ್ಲಾ ಹಕ್ಕು ಪತ್ರ ಕೊಡುವಾಗ ವಾದಿಗೂ ಸಹ ಹಕ್ಕು ಪತ್ರ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ಹಕ್ಕು ಪತ್ರವನ್ನು ಇ ಓ ರವರು ಕೊಟ್ಟಿರುತ್ತಾರೆ. ಊರಿನಲ್ಲಿ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಹಕ್ಕು ಪತ್ರ ಕೊಟ್ಟಿರುತ್ತಾರೆ. ಹಕ್ಕು ಪತ್ರಗಳನ್ನು ಒಟ್ಟು 35 ರಿಂದ 40 ಒಳಗೆ ಕೊಟ್ಟಿರುತ್ತಾರೆ. ಅವರ ಹೆಸರು ಹೇಳಲಾಗುವುದಿಲ್ಲ. ಅವರೆಲ್ಲರಿಗೂ ಕೊಟ್ಟ ಹಕ್ಕು ಪತ್ರಗಳ ಸಂಖ್ಯೆ ಹೇಳಲಾಗುವುದಿಲ್ಲ. ಹಕ್ಕು ಪತ್ರ ಕೊಟ್ಟ ದಿನಾಂಕ ತಿಂಗಳು ಹೇಳಲಾಗುವುದಿಲ್ಲ. 1996 ರಲ್ಲಿ ಕೊಟ್ಟಿರುತ್ತಾರೆ. ವಾದಿಗೆ ಇ ಓ ರವರು ಕೊಟ್ಟಿರುತ್ತಾರೆ, ನಂತರ ಗಲಾಟೆಯಾಯಿತು ನಾವು ಮನೆಗಳನ್ನು ಕಟ್ಟಿಕೊಂಡಿದ್ದೇವೆ. ದರಕಾಸ್ತು ಪ್ರತಿ ಕೊಡಬೇಕಾದರೆ ನಮ್ಮ ಸಹಿ ಪಡೆದಿಲ್ಲ ಹಾಗೇ ಕೊಟ್ಟಿರುತ್ತಾರೆ. ನನ್ನದು ದಾವಾ ಆಸಿಯ ಕೆಳಗಿನ 12 ನೇ ಸೈಟ್. ನನ್ನ ಸೈಟ್‌ನಿಂದ ನಾಲ್ಕು ಸೈಟ್ ಆದ ನಂತರ ವಾದಿಯ ಸೈಟ್ ಇದೆ. ಆ ನಾಲ್ಕು ಸೈಟ್ ರಾಮಪ್ಪ, ನಡಿಪಪ್ಪ, ಬೋಡಿ ವೆಂಕಟರಾಯಪ್, ವೆಂಕಟಪ್ಪ.

ನನ್ನದು ಆದ ತಕ್ಷಣ ವೆಂಕಟಪ್ಪನದ್ದು ಇದೆ. ವೆಂಕಟಪ್ಪನ ಸೈಟ್ 13 ನೇ ನಂಬರ್. ಆ 13 ನೇ ನಂಬರ್ ಸೈಟ್ ನನ್ನ ಸೈಟ್ ನ ಪಶ್ಚಿಮಕ್ಕೆ ಇದೆ. ನನ್ನ ಸೈಟ್ ಸುತ್ತಲೂ ಇರುವ ಸೈಟ್ ನಂಬರ್ ಗಳು ಹೇಳಲಾಗುವುದಿಲ್ಲ. ನನಗೆ ಸೈಟ್ ಕೊಟ್ಟಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸೈಟ್ ನೀಡಿದ್ದರೆ ಸುತ್ತಲೂ ಇರುವ ಸೈಟ್ ಗಳ ನಂಬರ್ ಗಳು ಗೊತ್ತಿತ್ತು ನನಗೆ ಸೈಟ್ ಕೊಡದ ಕಾರಣ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಸೈಟ್ ನ ಪಶ್ಚಿಮಕ್ಕೆ ಗೌರಮ್ಮನ ಸೈಟ್ ಬರುತ್ತದೆ. ನಮಗೆ ಸೈಟ್ ನೀಡಿದೆ ಎನ್ನಲಾದ ಸೈಟ್ ನ ಮೂಲ ಜಮೀನು ಬ್ರಾಹ್ಮಣರ ಮಾನ್ಯ ಅದರಲ್ಲಿ ನಾವು ಗುಡಿಸಲು ಹಾಕಿಕೊಂಡಿದ್ದು ನಂತರ ನಮಗೆ ದರಕಾಸ್ತು ಮಾಡಿ ಕೊಟ್ಟಿರುತ್ತಾರೆ. ನಮಗೆ ಸೈಟ್ ಅನ್ನು ನೀಡಿರುವ ಜಮೀನಿನ ಒಟ್ಟು ವಿಸ್ತೀರ್ಣ ಹೇಳಲಾಗುವುದಿಲ್ಲ. ಸೈಟ್ ಗಳು ಇರುವ ಜಮೀನು ಶೆಟ್ಟಿನಾಯಕನಹಳ್ಳಿಗೆ ಸೇರಿದ್ದು. ಈ ಸೈಟ್ ಗಳು ಗ್ರಾಮದ ಉತ್ತರಕ್ಕೆ ಇದೆ.

ದಾವಾ ಆಸ್ತಿಯ ಬಳಿಯಲ್ಲಿ ಗೌರಮ್ಮನ ಸೈಟ್ ನ ವಿಚಾರವಾಗಿ 1 ನೇ ಪ್ರತಿವಾದಿ ಮತ್ತು ವಾದಿಯ ನಡುವೆ ಗಲಾಟೆ ಯಾಗಿರುತ್ತದೆ. ಈ ಗಲಾಟೆಯ ವಿಚಾರವಾಗಿ ಪೋಲಿಸರಿಗೆ ದೂರು ಕೊಟ್ಟಿಲ್ಲ. ಗಲಾಟೆ ವೇಳೆ ನಾನು ಇರಲಿಲ್ಲ. ಗಲಾಟೆ ನಿಂತ ಮೇಲೆ ನಾನು ಹೋಗಿರುತ್ತೇನೆ. ಗಲಾಟೆ ಯಾಗಿರುವ ಬಗ್ಗೆ ಪಂಚಾಯ್ತಿ ನಡೆದಿಲ್ಲ. ಗಲಾಟೆಯನ್ನು ವಾದಿಯು ಪಾಯ ಹಾಕಿರುವ ವಿಚಾರವಾಗಿ ಪ್ರತಿವಾದಿಗಳು ಮಾಡಿರುತ್ತಾರೆ ಎಂದು ವಾದಿ ಹೇಳಿರುತ್ತಾರೆ. ವಾದಿಯು ಪಾಯ ಹಾಕಲು ಅನುಮತಿ ಪಡೆದುಕೊಂಡಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಹಕ್ಕು ಪತ್ರವನ್ನು

ಬಿಟ್ಟು ಬೇರೆ ದಾಖಲೆಗಳನ್ನು ನಾನು ನೋಡಿಲ್ಲ. ವಾದಿಯೇ 1 ನೇ ಪ್ರತಿವಾದಿ ವಿರುದ್ಧ ಗಲಾಟೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಪಾಯ ಇಲ್ಲ, ವಾದಿ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು 2 ನೇ ಪ್ರತಿವಾದಿಗೆ ಸೇರಿದುದ ವಾದಿಗೆ ಸೇರಿಲ್ಲ ಎಂದರೆ ಸರಿಯಲ್ಲ. ಹಕ್ಕು ಪತ್ರಗಳ ಪ್ರಕಾರ 2 ನೇ ಪ್ರತಿವಾದಿ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ಗೌರಮ್ಮನಿಗೆ ಹಕ್ಕು ಪತ್ರ ಇದೆ. ವಾದಿಗೆ ದಾವಾಆಸ್ತಿಯ ಹಕ್ಕು ಪತ್ರ ಕೊಟ್ಟಿಲ್ಲ ಎಂದರೆ ಸರಿಯಲ್ಲ ವಾದಿಯೇ 2 ನೇ ಪ್ರತಿವಾದಿ ವಿರುದ್ಧ ಗಲಾಟೆ ಮಾಡಿದ್ದರಿಂದ 2 ನೇ ಪ್ರತಿವಾದಿ ಪೋಲಿಸರಿಗೆ ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ